4. ಅಧ್ಯಕ್ಷರು : ಶ್ರೀ ವಿ.ಕೆ. ಸಾಹುಕಾರ್,
ಕಾರ್ಯದರ್ಶಿ : ಶ್ರೀ ಕೆ.ಬಿ. ಕೋಳಿವಾಡ.

5. ಅಧ್ಯಕ್ಷರು : ಶ್ರೀ ವಿ.ಕೆ.ಸಾಹುಕಾರ್,
ಕಾರ್ಯದರ್ಶಿ : ಶ್ರೀ ಕೆ, ಬಿ, ಕೋಳಿವಾಡ.

1650 (2024) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಸವಣೂರು ನಗರದಲ್ಲಿ ದಿನಾಂಕ : 29.04.2000 ರಂದು ನೀರಿಗಾಗಿ ಉಪವಾಸ ಸತ್ಯಾಗ್ರಹ ಕೈಗೊಂಡ ಸಂದರ್ಭದಲ್ಲಿ, ಅಮಾಯಕರನ್ನು ನಿರಪರಾಧಿ ಹಾಗೂ ಬಡ ನಾಗರಿಕರನ್ನು ಬಂಧಿಸಿ ಅವರ ಮೇಲೆ 6 ಪ್ರಕರಣಗಳನ್ನು ದಾಖಲಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಈಗಾಗಲೇ ಈ ಪ್ರಕರಣ ನಾಲ್ಕು ವರ್ಷಗಳಿಂದ ನ್ಯಾಯಾಲಯದಲ್ಲಿ ನಡೆದಿದ್ದು, ಇತ್ತೀಚೆಗೆ ಈ 6 ಪ್ರಕರಣಗಳು ಸವಣೂರ ನ್ಯಾಯಾಲಯದಿಂದ ಹಾವೇರಿ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಪ್ರಕರಣಗಳು ಮುಂದುವರೆದಿದ್ದು, ಇದರಿಂದ ಅಮಾಯಕರಿಗೆ ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ಸಾಕಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ. ಹಾಗಿದ್ದಲ್ಲಿ ಸರ್ಕಾರವು ಈ ಪ್ರಕರಣಗಳನ್ನು ವಾಪಸ್ಸು ಪಡೆದುಕೊಳ್ಳಲು ಏನಾದರು ಕ್ರಮಗಳನ್ನು ಕೈಗೊಂಡಿದೆಯೆ?

ಈ. ಹಾಗಿದ್ದಲ್ಲಿ ಈ ಮೊಕದ್ದಮೆಗಳನ್ನು ವಾಪಸ್ಸು ಪಡೆಯಲು ಸರ್ಕಾರ ತೀವ್ರಗತಿಯಲ್ಲಿ ಕ್ರಮ ಕೈಗೊಳ್ಳುತ್ತಿದೆಯೆ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ಬಂದಿದೆ.

ಆ. ಬಂದಿದೆ.

ಇ. ಸದರಿ ಮೊಕದ್ದಮೆಗಳಲ್ಲಿ ಆರೋಪಿತರು ಲಕ್ಷಾಂತರ ರೂಪಾಯಿ ನಷ್ಟವುಂಟು ಮಾಡಿದ್ದು ಬೆಂಕಿಯ ಅನಾಹುತ, ಕೊಲೆಯತ್ನ ಇತ್ಯಾದಿ ಜೀವಾವಧಿ ಶಿಕ್ಷೆಗೆ ಒಳಪಡುವ ಅಪರಾಧಗಳನ್ನು ಎಸಗಿರುವುದರಿಂದ ಹಿಂತೆಗೆದುಕೊಳ್ಳಬಾರದೆಂದು ನಿರ್ಣಯಿಸಲಾಗಿದೆ.

1651(2025) ಶ್ರೀ. ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಶಿಗ್ಗಾಂವ – ಸವಣೂರ ತಾಲ್ಲೂಕಿನ ಶಾಲೆಗಳಲ್ಲಿ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಸಲಕರಣೆಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಈ ಮತಕ್ಷೇತ್ರದಲ್ಲಿ ಎರಡು ತಾಲ್ಲೂಕು ಗಳಿದ್ದು, ಸಾಕಷ್ಟು ಶಾಲೆಗಳಲ್ಲಿ ವಿಜ್ಞಾನ ಸಲಕರಣೆಗಳು ಇಲ್ಲದೇ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದ್ದು, ಇದಕ್ಕೆ ಹೆಚ್ಚಿನ ಅನುದಾನ ಬಿಡುಗಡೆಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ?

ಇ. ಹಾಗಿದ್ದಲ್ಲಿ, ಎಷ್ಟು ಕಾಲಾವಕಾಶದಲ್ಲಿ ಅನುದಾನ ಬಿಡುಗಡೆಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆ?

ಶ್ರೀ ಬಸವರಾಜ್ .ಎಸ್. ಹೊರಟ್ಟಿ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಣ್ಣ ಉಳಿತಾಯ ಸಚಿವರು):

ಅ. ಬಂದಿರುವುದಿಲ್ಲ.